ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1231
ಸದಸ್ಯರ ಹೆಸರು	:	ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	:	22.09.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಭೂ ಪರಿವರ್ತನೆಯಾದ ಜಾಗಗಳ ವಿವರಗಳನ್ನು ಹತ್ತಾರು ವರ್ಷಗಳು ಕಳೆದರೂ ಇನ್ನೂ ಪಹಣಿ ಪತ್ರಿಕೆಯಲ್ಲಿ ದಾಖಲಿಸದೇ ಇರುವುದರಿಂದಾಗಿ, ಕೆಲವರು ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಶೂನ್ಯ ಬಡ್ಡಿ ಸಾಲದಂತಹ ಯೋಜನೆಗಳ ಸವಲತ್ತುಗಳನ್ನು ಪಡೆಯುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ಒದಗಿಸುವುದು)	2018ನೇ ವರ್ಷದಿಂದ, ಕಂದಾಯ ಇಲಾಖೆಯ ಸಾಫ್ಟ್‌ವೇರ್ ಮೂಲಕ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲಾಗುತ್ತಿದೆ. ಈ ಸಾಫ್ಟ್‌ವೇರ್ ಎಲ್ಲಾ ಭೂ ಪರಿವರ್ತನೆ ಆದೇಶಗಳನ್ನು ತಕ್ಷಣವೇ ಪಹಣಿಯಲ್ಲಿ ತೋರಿಸುತ್ತದೆ. ಆದರೆ 2018 ಕ್ಕಿಂತ ಮೊದಲು ಭೂ ಪರಿವರ್ತನೆ ಆದೇಶಗಳನ್ನು ಕೈಯಿಂದ ಸಹಿ ಮಾಡಲಾಗುತ್ತಿತ್ತು. ಎಲ್ಲಾ ಸಂದರ್ಭಗಳಲ್ಲಿ ಪಹಣಿಯಲ್ಲಿ ಕೃಷಿಯಿಂದ ಕೃಷಿಯೇತರ ಬಳಕೆಗೆ ಪರಿವರ್ತನೆಯ ಪ್ರಸ್ತಾಪವನ್ನು ಕೈಯಿಂದ ಬರೆಯಬೇಕಾಗಿತ್ತು. ಆದರೆ, ಈಗ ಸಾಫ್ಟ್‌ವೇರ್ ಮೂಲಕ ಪರಿವರ್ತನೆ ಮಾಡುವುದರಿಂದ ಹೇಳಲಾದ ಸಮಸ್ಯೆಯನ್ನು ಪರಿಹರಿಸಲಾಗಿದೆ.
ಆ	ಕೃಷಿ ಜಾಗವನ್ನು ವಾಸ್ತವ್ಯ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡಿದ ಸಂದರ್ಭದಲ್ಲಿ ಕಂದಾಯ ಇಲಾಖೆಯಿಂದ ಮಾಹಿತಿಯನ್ನು ಗ್ರಾಮ ಪಂಚಾಯತಿಗಳಿಗೆ ನೀಡದೇ, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಭೂ ಪರಿವರ್ತನೆಯಾದ ಎಲ್ಲಾ ಜಾಗಗಳಿಗೆ ಭೂ ತೆರಿಗೆಯನ್ನು ವಿಧಿಸಲು ಸಾಧ್ಯವಾಗದೇ ಸರ್ಕಾರಕ್ಕೆ ವರ್ಷಂಪ್ರತಿ ಲಕ್ಷಾಂತರ ರೂ. ತೆರಿಗೆ ನಷ್ಟವಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ವಸತಿ ಅಥವಾ ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆದೇಶದಲ್ಲಿ ಕಂದಾಯ ಇಲಾಖೆಯು ಭೂಮಿಯನ್ನು ಕೃಷಿಯೇತರ ಬಳಕೆಗೆ ಬಳಸುವ ಮೊದಲು ಮಾಲೀಕರು, ಗ್ರಾಮ ಪಂಚಾಯತ್ ಅಥವಾ ನಗರ ಸ್ಥಳೀಯ ಸಂಸ್ಥೆ ಅಥವಾ ಕೈಗಾರಿಕಾ ಇಲಾಖೆಯ ಅನುಮೋದನೆಯನ್ನು ಪಡೆಯಬೇಕು ಎಂಬ ಷರತ್ತು ವಿಧಿಸಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಗ್ರಾಮಪಂಚಾಯತ್ ಅಥವಾ ನಗರ ಸ್ಥಳೀಯ ಸಂಸ್ಥೆಗಳು ಅಥವಾ ಕೈಗಾರಿಕೆಗಳ ಇಲಾಖೆಯು ಯಾವುದೇ ಭೂಮಿಯನ್ನು ಆಯಾ ಸಂಸ್ಥೆ/ಇಲಾಖೆಗಳ ಅನುಮೋದನೆ ಪಡೆಯದೇ ವಸತಿ ಅಥವಾ ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸಿದಲ್ಲಿ ಕ್ರಮಕೈಗೊಳ್ಳಬೇಕು.

ಸಂಖ್ಯೆ:ಆರ್‌ಡಿ/115/ಟಿಆರ್‌ಎಂ/2020

(ಆರ್. ಅಶೋಕ)
ಕಂದಾಯ ಸಚಿವರು